# ಬಹೂಪಯೋಗಿ ಎಕ್ಕ

ಚಿತ್ರ ಬರಹ: ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ

ಎಕ್ಕದಲ್ಲಿ ಎರಡು ವಿಧ; ಬಿಳಿ ಎಕ್ಕ ಮತ್ತು ನೀಲಿ ಎಕ್ಕ. ಬಿಳಿ ಎಕ್ಕದ ಹೂವು ನವಗ್ರಹ ಪೂಜೆಯಲ್ಲಿ ಸೂರ್ಯ ದೇವರ ಪೂಜೆಗೆ ಪ್ರಿಯವಾದುದು ಹಾಗೂ ಹೂವಿನ ಮಾಲೆ ಆಂಜನೇಯ ಮತ್ತು ಗಣಪತಿ ದೇವರಿಗೆ ಪ್ರಿಯವಾದುದ್ದು. ಈ ಗಿಡವನ್ನು ಪೂಜನೀಯ ಭಾವದಿಂದ ಕಂಡಿರುವುದು ವೇದಗಳಲ್ಲಿ ಉಲ್ಲೇಖವಿದೆ.

ಮನೆ ಹೂತೋಟದಲ್ಲಿ ಬಿಳಿ ಎಕ್ಕವನ್ನು ನೆಟ್ಟು ಪ್ರತಿನಿತ್ಯ ಮುಂಜಾವಿನಲ್ಲಿ ಪೂಜಿಸಿದರೆ ಅಷ್ಟೈಶ್ವರ್ಯ ವೃದ್ಧಿಯಾಗುತ್ತದೆ. ಅತೃಪ್ತ ಅವಿವಾಹಿತ ಪ್ರೇತಾತ್ಮಗಳಿಗೆ ಎಕ್ಕದ ಗಿಡಕ್ಕೆ ಮದುವೆ ಮಾಡಿಸುವ ಮೂಢನಂಬಿಕೆ ಕೆಲವು ಹಳ್ಳಿಗಳಲ್ಲಿ ಜಾಲ್ತಿಯಲ್ಲಿದೆ. ಕ್ಯಾಲಟ್ರೋಪಿಸ್ ಪ್ರೋಸಿರಾ ಎನ್ನುವ ಸಸ್ಯಶಾಸ್ತ್ರೀಯ ಹೆಸರಿನಿಂದ ಈ ಗಿಡವನ್ನು ಗುರುತಿಸುತ್ತಾರೆ. ಎಕ್ಕದ ಗಿಡ ಒಂದರಿಂದ 3 ಮೀ ಎತ್ತರಕ್ಕೆ ಬೆಳೆಯುತ್ತದೆ, ಇದರ ಎಲೆಯು 10 ರಿಂದ 13 ಸೆಂ.ಮೀ ಅಗಲ ಮತ್ತು 17 ರಿಂದ 19 ಸೆಂ.ಮೀ ಉದ್ದವಿರುತ್ತದೆ. ಈ ಗಿಡ ಏಷಿಯಾ ಮತ್ತು ಆಫ್ರಿಕಾಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.



## ಆರೋಗ್ಯಕ್ಕೆ ಪೂರಕ

ಒಣಗಿದ ಎಕ್ಕದ ಗಿಡದ ಬೇರಿನ ತೊಗಟೆಯೂ ಜ್ವರ ನಿವಾರಕ ಗುಣ (ಫೆಬ್ರಿಫ್ಯೂಜ್), ಜಂತುಹುಳು ನಿವಾರಕ ಔಷಧೀಯ ಗುಣ, ಕಲ್ಮಶ ನಿವಾರಕ ಗುಣ, ಕಫ ನಿವಾರಕ ಗುಣ, ಭೇದಿ ನಿವಾರಕ ಗುಣಗಳನ್ನು ಹೊಂದಿವೆ. ಇಷ್ಟೆಲ್ಲಾ ಗುಣವಿರುವುದರಿಂದ ಇದನ್ನು ಆನೆಕಾಲು ರೋಗ (ಎಲಿಫಂಟೈಯಾಸಿಸ್), ಕುಷ್ಠರೋಗ (ಲೆಪ್ರಸಿ), ಭೇದಿ ಮತ್ತು ದೀರ್ಘಕಾಲೀನ ಚರ್ಮರೋಗ ಅಥವಾ ಇಸಬು (ಕ್ರಾನಿಕ್ ಎಕ್ಸಿಮಾ) ಕಾಯಿಲೆಯನ್ನು ಗುಣಪಡಿಸಲು ಬಳಸುತ್ತಾರೆ.

ಒಣ ಬೇರಿನ ಪುಡಿಯನ್ನು ದಮ್ಮು ಅಥವಾ ಉಬ್ಬಸ (ಆಸ್ತಮಾ), ಒಳ ಶ್ವಾಸನಾಳ ಊತ (ಬ್ರಾಂಕೈಟಿಸ್) ಮತ್ತು ಅಜೀರ್ಣ (ಡಿಸ್‌ಪೆಪ್ಸಿಯಾ) ನಿವಾರಣೆಗೆ ಬಳಸುತ್ತಾರೆ.

ಒಣಗಿದ ಎಕ್ಕದ ಗಿಡವೂ ಉತ್ತಮ ಟಾನಿಕ್, ಕಫ ನಿವಾರಕ ಗುಣ, ಕಲ್ಮಶ ನಿವಾರಕ ಗುಣ, ಜಂತುಹುಳು ನಿವಾರಕ ಔಷಧೀಯ ಗುಣ ಹೊಂದಿದೆ.

ಎಕ್ಕದ ಗಿಡದ ಎಲೆಗಳನ್ನು ಪಾರ್ಶ್ವವಾಯು ಅಥವಾ ಲಕ್ವ (ಪ್ಯಾರಲಿಸಿಸ್), ಗಾಯದ ಊತಕ್ಕೆ, ಬಿಟ್ಟು ಬಿಟ್ಟು ಬರುವ ಜ್ವರ ನಿವಾರಿಸಲು ಬಳಸುತ್ತಾರೆ. ಎಲೆಗಳನ್ನು ಎಣ್ಣೆಯಲ್ಲಿ ಕುದಿಸಿ ಸಂಧಿ ನೋವು ಇರುವ ಜಾಗಕ್ಕೆ ಹೊರಗಿನಿಂದ ಹಚ್ಚುತ್ತಾರೆ.

ಎಕ್ಕದ ಗಿಡದ ಹೂವನ್ನು ಆಸ್ತಮಾ, ನಾಲಿಗೆಗೆ ಆಹಾರ ರುಚಿಸದಾಗ (ಅನರೆಕ್ಸಿಯಾ), ಊರಿಯೂತ (ಇನ್‌ಫ್ಲಮೇಷನ್) ಮತ್ತು ಗಡ್ಡೆಗಳನ್ನು ಹೋಗಲಾಡಿಸಲು ಬಳಸುತ್ತಾರೆ.

ಹಳ್ಳಿಗಳಲ್ಲಿ ಜನ ಕಾಲಿಗೆ ಮುಳ್ಳು ಚುಚ್ಚಿದಾಗ ಸೂಜಿಯಿಂದ ಬಗೆದು ಎಕ್ಕದ ಗಿಡದ ಹಾಲನ್ನು ಹಾಕುತ್ತಾರೆ, ಮುಳ್ಳು ತಾನಾಗಿಯೇ ಹೊರಬರುತ್ತದೆ. ಎಕ್ಕದ ಗಿಡದ ಹಾಲನ್ನು ಮೂಲವ್ಯಾಧಿ, ಹಲ್ಲು ನೋವು ನಿವಾರಿಸಲು, ಬೊಕ್ಕ ತಲೆ, ಕೂದಲು ಉದರುವಿಕೆ ಸಂಬಂಧಿಸಿದ ಕಾಯಿಲೆಯನ್ನು ಗುಣಪಡಿಸಲು ಬಳಸುತ್ತಾರೆ.

ಎಕ್ಕದ ಗಿಡದ ಕಾಯಿಗಳು ಬಲಿತು ಒಡೆದಾಗ ಅದರೊಳಗಿರುವ ಬೀಜದ ಕೊನೆಯಲ್ಲಿ ಹತ್ತಿಯ ರೀತಿಯ ವಸ್ತುವಿರುತ್ತದೆ. ಇದನ್ನು ತಲೆದಿಂಬು ತಯಾರಿಸಲು ಹಳ್ಳಿಗಳಲ್ಲಿ ಬಳಸುತ್ತಾರೆ.

ಹಾಗೆಂದು ಈ ಎಲ್ಲ ಚಿಕಿತ್ಸೆಯನ್ನು ಮಾಡುವ ಮುನ್ನ ಒಮ್ಮೆ ತಜ್ಞ ವೈದ್ಯರ ಸಲಹೆ ಪಡೆದುಕೊಳ್ಳಿ.



